# ಕರ್ನಾಟಕ ಸರ್ಕಾರ

ಉಪ ತಹಶೀಲ್ದಾರರು ನಾಡಕಾರ್ಯಾಲಯ ಚೋರನೂರು ಇವರ ನಡವಳಿಗಳು.

ಉಪಸ್ಥಿತಿ : ಶ್ರೀ ಗುರುರಾಜ ಕೆ. ದೇಸಾಯಿ ಉಪತಹಶೀಲ್ದಾರರು.
ಅರ್ಜಿದಾರರು : ಅಬುಕಲಾಂ ಆಜಾದ್ ತಂದೆ ಅಬ್ದುಲ್ ರಷೀದ್ ಸಾಬ್
ವಿರುದ್ಧದಾರರು : ಸಯ್ಯದ್ ಸುಬಾನ್ ಸಾಬ್ ಸಾ॥ ತ್ಯಾಗದಾಳ.
ವಿಷಯ : ಜಿಗೇನಹಳ್ಳಿ ಗ್ರಾಮದ ಭೂಮಿ ಸ.ನಂ: 172/ಅ/1ರ ಕ್ಷೇತ್ರ ಎಕರೆ 1-65 ಸೆಂಟ್ಸ್ ವರ್ಗಾವಣೆ ಮಾಡಲು ತಕರಾರು ಬಂದ ಬಗ್ಗೆ ವಿಚಾರಣೆ.

**ಪೀಠಿಕೆ :** ಅರ್ಜಿದಾರರಾದ ಶ್ರೀ ಅಬುಕಲಾಂ ಆಜಾದ್ ಸಾ॥ ಅರ್ಜಿದಾರರಾದ ಶ್ರೀ ಅಬುಕಲಾಂ ಅಜಾದ್ ಸಾ॥ ತ್ಯಾಗದಾಳ ಇವರು ,

ದಿನಾಂಕ : 28-03-2016 ರಂದು ಖಂಡಿತ ಕ್ರಯ ಪತ್ರ ಮಾಡಿಸಿಕೊಂಡಿರುತ್ತಾರೆ. FORM NO J:(RULE 44 and 63) ತಿಳುವಳಿಕೆ ಪತ್ರದ ಮೇರೆಗೆ ವರ್ಗಾವಣೆ ಮಾಡುವ ಸಂದರ್ಭದಲ್ಲಿ ವಿರುದ್ದದಾರ ತಕರಾರು ಅರ್ಜಿ ಸಲ್ಲಿಸಿರುತ್ತಾರೆ. ಈ ಹಿನ್ನಲೆಯಲ್ಲಿ ಕಂದಾಯ ನಿರಕ್ಷಕರು ತಕರಾರು ಪ್ರಕರಣವೆಂದು ಪರಿಗಣಿಸಿ ವಿಚಾರಣೆಗೆ ಉಪ ತಹಶೀಲ್ದಾರರು ಚೋರನೂರು ಇವರಿಗೆ ಮೂಲ ಕಡತವನ್ನು ವಿಚಾರಣೆಗೆ ಕಳುಹಿಸಿರುತ್ತಾರೆ. ಅದರಂತೆ ಮೂಲ ಕಡತ ಬಂದಿರುತ್ತದೆ.

ಉಭಯತರರಿಗೆ ನೋಟಿಸ್ ಜಾರಿ ಮಾಡಲಾಯಿತು. ತಕರಾರುದಾರರು ಗೈರು ಹಾಜರಾಗಿರುತ್ತಾರೆ. ಹಾಗೂ ಅರ್ಜಿದಾರರು ಹಾಜರಾಗಿರುತ್ತಾರೆ ಮತ್ತು ತಕರಾರುದಾರರು ಅರ್ಜಿದಾರರ ಮೂಲಕ 20 ರುಪಾಯಿ ಛಾಪಾ ಕಾಗದದಲ್ಲಿ ಒಪ್ಪಿಗೆ ಪತ್ರದಲ್ಲಿ ಬರೆಯಿಸಿ ಕಳುಹಿಸಕೊಟ್ಟಿರುತ್ತಾರೆ.

ಕ್ರಯದ ನೈಜತೆ ಮತ್ತು ಒಟ್ಟು ಸ್ವತ್ತಿನ ಮಾರಾಟದ ಅಧಿಕಾರಕುರಿತಂತೆ ಉದ್ಭವಿಸುವ ಪ್ರಶ್ನೆಗಳನ್ನು ನಿರ್ಣಯಿಸಲು ಕಂದಾಯ ಇಲಾಖೆಯ ಅಧಿಕರಿಗಳಿಗೆ ಅಧಿಕಾರವಿರುವುದಿಲ್ಲ. ಅಂಥಹ ಅಧಿಕಾರವು ಸಕ್ಷಮ ಸಿವಿಲ ನ್ಯಾಯಾಲಯಕ್ಕೆ ಮಾತ್ರ ಇರುತ್ತದೆ. ಬಸಪ್ಪ ನಿಂಗಪ್ಪ ವಿರುದ್ದ ಉಪ ಅಧಿಕಾರಿಗಳು ಮತ್ತಿತರರು ಪ್ರಕರಣ ಸಂಖ್ಯೆ : 2001(1) KCCR488: ಮತ್ತು ಕಂದಾಯ ಇಲಾಖೆಯ ಅಧಿಕರಿಗಳು ಒಬ್ಬ ವ್ಯಕ್ತಿಗೆ ಸ್ವತ್ತಿನ ಹಕ್ಕು ನೊಂದಣಿ ದಸ್ತಾವೇಜಿನ ಮೂಲಕ ಉದ್ಭವಿಸಿದ್ದರೆ, ಆತನ ಹೆಸರಲ್ಲಿ ಕಡ್ಡಾಯವಾಗಿ ಕಂದಾಯ ದಾಖಲೆಗಳಲ್ಲಿ ನೊಂದಾಯಿಸತಕ್ಕದ್ದು. ಪಕ್ಷದಾರರನ ಹಕ್ಕು ಮತ್ತು ಪದನಾಮವನ್ನು ನಿರ್ಣಯಿಸುವ ಅಧಿಕರವಿರುವುದಿಲ್ಲವೆಂದು ಈ ಪ್ರಕರಣಗಳಿಂದ ಮನಗೊಂಡು ಈ ಕೆಳಗಿನಂತೆ ತಕರಾರುದಾರರ ಅರ್ಜಿಯನ್ನು ಗೈರು ಮಂಜರಿಗೆ ಹಾಕಿದೆ, ಈ ಕೆಳಗಿನಂತಿದೆ.

(P.T.O)

## -:ಆದೇಶ:-

ಕ್ರ:ತಕರಾರು:21/16-17 ದಿನಾಂಕ : 31-05-2016

ಪೀಠಿಕೆಯಲ್ಲಿ ವಿವರಿಸಿದ ಕಾರಣಗಳಿಂದಾಗಿ ಅರ್ಜಿದಾರರಾದ ಅಬುಕಲಾಂ ಆಜಾದ್ ತಂದೆ ದಿ॥ ಅಬ್ದುಲ್ ರಷಿದ್‌ಸಾಬ್ ಇವರ ಹೆಸರಿಗೆ ಖರೀದಿ ನೊಂದಣಿ ಪತ್ರದ ಪ್ರಕಾರ ಜಿಗೇನಹಳ್ಳಿ ಗ್ರಾಮದ ಭೂಮಿ ಸನಂ:172/ಎ-1ರ ಕ್ಷೇತ್ರ 1.65 ಸೆಂಟ್ಸ್‌ಗೆ ವರ್ಗಾವಣೆ ಮಾಡಲು ತೆರೆದ ನ್ಯಾಯಾಲಯದಲ್ಲಿ ಭಹಿರಂಗವಾಗಿ ದಿನಾಂಕ : 31—05-2016 ರಂದು ಘೋಷಿಸಲಾಯಿತು.

ಗುರುರಾಜ ಕೆ. ದೇಸಾಯಿ
ಉಪ ತಹಶೀಲ್ದಾರರು
ನಾಡಕಾರ್ಯಾಲಯ
ಚೋರನುರು

<u>ಇದರ ಒಂದು ಪ್ರತಿಯನ್ನು:-</u>

1) ಅರ್ಜಿದಾರರಿಗೆ / ತಕರಾರುದಾರರಿಗೆ/ ಭೂಮಿಕೇಂದ್ರ ಆಪರೇಟರಗೆ ಆದೇಶವನ್ನು ಪಾಲಿಸಲು ನೀಡಲಾಗಿದೆ.